






# ಸಾಬೂನಿನಲ್ಲಿ ಕೈಚಳಕ



★ ಚಿತ್ರ-ಬರಹ: ಮಲ್ಲಿಕಾರ್ಜುನ ರಾಜನಾಳ



ಬಾಗಲಕೋಟ ಜಿಲ್ಲೆಯ ಬಾದಾಮಿ ಗುಳೇದಗುಡ್ಡದ ಯಮನಪ್ಪ ಬಸಪ್ಪ ಹಿರಾಳ ಎಂಬ ಈ ಕಲಾವಿದನ ಕೈಗೆ ಸಿಗುವ ಪ್ರತಿಯೊಂದು ಬೇಡವಾದ ಸರಕು, ಸಾಮಾನುಗಳು ಸುಂದರ ಕಲಾಕೃತಿಯಾಗಿ ಜನ್ಮ ಪಡೆಯುತ್ತವೆ. ಮಾರುಕಟ್ಟೆಯಲ್ಲಿ ಸಿಗುವ ಮೈಸೂರು ಸ್ಯಾಂಡಲ್ ಸೋಪ್, ಮೇಣಬತ್ತಿ (ಕ್ಯಾಂಡಲ್), ಹಳ್ಳ, ಕೆರೆಗಳಲ್ಲಿ ಯಾರಿಗೂ ಬೇಡವಾಗಿ ಬಿದ್ದ ಉಸುಕು, ಕಲ್ಲು, ಮಣ್ಣುಗಳು ಈ ಕಲಾವಿದನ ಕೈಯಲ್ಲಿ ಕಲೆಯಾಗಿ ಅರಳುತ್ತವೆ.

ಮನುಷ್ಯನ ಮೈಯ ಕೊಳೆ ತೆಗೆಯುವ ಸಾಬೂನು, ಇಲ್ಲಿ ಒಬ್ಬ ಕಲಾವಿದನ ಕೈಯಲ್ಲಿ ಸುಂದರ ಆಕೃತಿಗಳಾಗಿ ರೂಪ ತಳೆದಿವೆ. ಸಾಬೂನಿನಲ್ಲಿ ಕಲೆಯ ರೂಪ ಮೂಡಿಸಿ ಈತ ಸರ್ವಧರ್ಮ ಸಾಮರಸ್ಯ ಸಾಧಿಸಿದ್ದಾನೆ. ವಿಶ್ವಗುರು ಬಸವಣ್ಣ, ಅಂಬಿಗರ ಚೌಡಯ್ಯ, ಏಸುಕ್ರಿಸ್ತ, ವಿಘ್ನನಿವಾರಕ ಗಣಪತಿ, ಅಯ್ಯಪ್ಪ ಸ್ವಾಮಿ, ಶಿರಡಿ ಸಾಯಿಬಾಬಾ, ರಾಘವೇಂದ್ರ, ಶ್ರೀಕೃಷ್ಣ– ಹೀಗೆ ಸಾಬೂನಿನಲ್ಲಿ ಮಹಾತ್ಮರ, ಸಾಧು ಸಂತರ ಕಲಾಕೃತಿಗಳನ್ನು ಅರಳಿಸಿ ಈತ ಕಲಾಪ್ರಿಯರ ಮನ ಗೆದ್ದಿದ್ದಾನೆ.

ವೃತ್ತಿಯಿಂದ ಶಾಮಿಯಾನದ ಕೆಲಸ ಮಾಡುವ ಈ ಕಲಾವಿದ ಸಮಯ ಸಿಕ್ಕಾಗಲೆಲ್ಲ ಸಾಬೂನಿನಲ್ಲಿ ಕುಸುರಿ ಕಲೆಯನ್ನು ಅರಳಿಸುತ್ತಾನೆ. ಕಲಾವಿದ ಯಮನಪ್ಪ ಸಾಬೂನು ಹಿಡಿದಾಗಲೆಲ್ಲ ಒಂದಲ್ಲ ಒಂದು ಕಲಾಕೃತಿ ಸಿದ್ದವಾಗುತ್ತದೆ. ಈ ಕಲೆಯನ್ನು ಯಮನಪ್ಪ ಹಿರಾಳ ಯಾರಿಂದಲೂ ಕಲಿತಿಲ್ಲ. ಹೀಗೊಂದು ಸ್ವಂತ ಪ್ರಯತ್ನದಿಂದ ಇದರಲ್ಲಿ ಹಿಡಿತ ಸಾಧಿಸಿದ್ದಾನೆ.

ಒಂದು ಕಲಾಕೃತಿ ರಚಿಸಲು ಈತನಿಗೆ 8ರಿಂದ 10 ದಿನಗಳು ಬೇಕು. 'ಇದರ ಕೆತ್ತನೆಗೆ ತಾಳ್ಮೆ ಬಹಳ ಅಗತ್ಯ' ಎನ್ನುತ್ತಾನೆ ಯಮನಪ್ಪ. ಬಡತನದಲ್ಲಿ ಅರಳಿದ ಈ ಪ್ರತಿಭೆಗೆ ಸಮಾಜ, ಸಂಘ ಸಂಸ್ಥೆಗಳ ಪ್ರೋತ್ಸಾಹದ ಅಗತ್ಯವಿದೆ.